# ಅನುಬಂಧ II

## 17 ವರ್ಗಗಳ ಮಾಹಿತಿ

## (ನಿಗದಿತ)

**ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ಉಪವಿಭಾಗ, ನವಲಗುಂದ.**

# : ಅಧಿಸೂಚನೆ :

ವಿಷಯ : ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (ಭಾರತ ಸರ್ಕಾರ) ಕರ್ನಾಟಕ ಸರ್ಕಾರ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ, ಇಲಾಖೆ ಉಪವಿಭಾಗ, ನವಲಗುಂದ.

## ಅನುಬಂಧ–2
## 17 ವರ್ಗಗಳ ಮಾಹಿತಿ

1. **ಕಚೇರಿ ರಚನೆಯ ವಿವರಗಳು**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ನವಲಗುಂದ. ಉಪವಿಭಾಗ ಕಚೇರಿಯು ಸ್ವಂತ ಕಟ್ಟಡದಲ್ಲಿ ನಡೆಯುತ್ತಿದೆ. ನವಲಗುಂದ ಲೋಕೊಪಯೋಗಿ ಇಲಾಖೆ ಉಪವಿಭಾಗ ನವಲಗುಂದ ತಾಲೂಕಿನ ಎಲ್ಲ ರಾಜ್ಯ ಹೆದ್ದಾರಿಗಳ, ಜಿಲ್ಲಾ ಮುಖ್ಯ ರಸ್ತೆಗಳ, ಕಟ್ಟಡಗಳ ಹಾಗೂ ಸೇತುವೆಗಳ ದುರಸ್ತಿ ಹಾಗೂ ನಿರ್ವಹಣೆಯ ಕೆಲಸವನ್ನು ನೋಡಿಕೊಳ್ಳತ್ತದೆ.

ಈ ಉಪವಿಭಾಗ ಕಚೇರಿಯ ಪ್ರಭಾರವನ್ನು **ಶ್ರೀ. ಎನ್.ಎಸ್.ಭರಡಿಶೆಟ್ಟರ** ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ (ಪ್ರಭಾರ) ನಿರ್ವಹಿಸುತ್ತಿರುವರು. ಈ ಕಚೇರಿಯಲ್ಲಿ 4. ಸಹಾಯಕ ಇಂಜನೀಯರರು 2. ಕಿರಿಯ ಇಂಜನೀಯರರು 1 ಪ್ರಥಮ ದರ್ಜೆ ಸಹಾಯಕರು, 2 ದ್ವಿತಿಯ ದರ್ಜೆ ಸಹಾಯಕರು 4 ಕಾರ್ಯನಿರೀಕ್ಷರು, 1 ಮೇಸ್ತ್ರಿ 2 ಜವಾನರು 1 ಚೌಕಿದಾರರು, ಕೆಲಸ ನಿರ್ವಹಿಸುತ್ತಿದ್ದಾರೆ. ಈ ಮೇಲೆ ತಿಳಿಸಿದ ಹುದ್ದೆಗಳಲ್ಲಿ ಸದ್ಯಕ್ಕೆ 4 ಕೆಲಸ ನಿರೀಕ್ಷಕರ ಹುದ್ದೆಗಳು 3 ಸಹಾಯಕ ಇಂಜನೀಯರ ಹುದ್ದೆಗಳು, 2 ಕಿರಿಯ ಇಂಜಿನೀಯರರು 1 ಕಂಪ್ಯೂಟರ್ ಅಪರೇಟರ್, 1 ಮೇಸ್ತ್ರಿ, ಹುದ್ದೆ ಖಾಲಿ ಇರುತ್ತವೆ. ಇಲಾಖೆಯ ಕೆಲಸಗಳ ಸುಗಮ ನಿರ್ವಹಣೆಗಾಗಿ ಶಾಖಾಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ನವಲಗುಂದ ಲೋಕೋಪಯೋಗಿ ಇಲಾಖೆ ಉಪವಿಭಾಗವು 113.94 ಕಿ.ಮೀ. ರಾಜ್ಯ ಹೆದ್ದಾರಿ, 304.42 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳ (ಮೇಲ್ದರ್ಜೆಗೇರಿಸಿದ ರಸ್ತೆಗಳು ಸೇರಿ) ಹಾಗೂ 46 ನಂ ಕಟ್ಟಡಗಳು ಹಾಗೂ ಸೇತುವೆಗಳ ರಚನೆ, ದುರಸ್ತಿ ಹಾಗೂ ನಿರ್ವಹಣೆಯ ಕೆಲಸವನ್ನು ನೋಡಿಕೊಳ್ಳತ್ತದೆ.

## 2. ಅಧಿಕಾರಿ/ಸಿಬ್ಬಂದಿಯವರ ಕರ್ತವ್ಯಗಳು

**ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು :**

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು ಉಪವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಉಪವಿಭಾಗದ ಸಮರ್ಥ ನಿರ್ವಹಣೆ ಹಾಗೂ ಉಪವಿಭಾಗದಲ್ಲಿ ನಡೆಯುತ್ತಿರುವ ಎಲ್ಲ ಮೂಲ ಹಾಗೂ ದುರಸ್ತಿ ಕಾಮಗಾರಿಗಳ ಉಸ್ತುವಾರಿಯ ಹೊಣೆ ಅವರದಾಗಿರುತ್ತದೆ. ಹಾಗುಾ ಕಾಮಗಾರಿಗಳಿಗೆ ಸಂಬಂಧಿಸಿದ ಸಾಮಾಗ್ರಿಗಳ ಸಂಗ್ರಹ, ಅವುಗಳ ನಿರ್ವಹಣೆಯ ಕುರಿತ ಲೆಕ್ಕ ಪತ್ರಗಳ ಪರಿಶೀಲನೆಯ ಜವಾಬ್ದಾರಿಯು ಅವರದಾಗಿರುತ್ತದೆ. ಉಪವಿಭಾಗಕ್ಕೆ ಸಂಬಂಧಿಸಿಂತೆ, ನಗದು ವ್ಯವಹಾರದ ಹೊಣೆಗಾಗಿಕೆ. ಅಧೀನ ಸಿಬ್ಬಂದಿಯವರು ನಿರ್ವಹಿಸುತ್ತಿರುವ ಕೆಲಸಗಳ ಕುರಿತು ಸಮರ್ಥ ಅವಲೋಕನೆ, ಅಳತೆ ಪುಸ್ತಕಗಳಲ್ಲಿಯ ನಮೂದಿಸುವಿಕೆಯನ್ನು ಪರಿಶೀಲಿಸುವುದು. ಕಾಮಗಾರಿಯ ಸ್ಥಳದಲ್ಲಿಯ ಸಾಮಾಗ್ರಿಗಳ ಸಂಗ್ರಹ ಯಾಂತ್ರಿಕ ಉಪಕರಣಗಳ ಪರಿಶೀಲನೆ. ಎಲ್ಲ ಕಾಮಗಾರಿಗಳ ಪ್ರಗತಿ ವರದಿಯ ಪರಿಶೀಲನೆ. ಉಪವಿಭಾಗದ ಎಲ್ಲ ಭಾರೀ ಮತ್ತು ಸಣ್ಣ ಕಾಮಗಾರಿಗಳ ತಪಾಸಣೆ. ಉಪವಿಭಾಗದ ವ್ಯಾಪ್ತಿಗೆ ಒಳಪಡುವ ಎಲ್ಲ ಕಟ್ಟಡ ಕಾಮಗಾರಿ, ರಸ್ತೆ ಕಾಮಗಾರಿ ಹಾಗೂ ಸೇತುವೆ ಕಾಮಗಾರಿಗಳನ್ನು ಕಾಲಕಾಲಕ್ಕೆ ನಿಗದಿತವಾಗಿ ತಪಾಸಣೆ ಹಾಗೂ ಪರಿಶೀಲನೆ ಮಾಡುವುದು.

**ಸಹಾಯಕ ಇಂಜನಿಯರರು / ಕಿರಿಯ ಇಂಜನೀಯರರು :**

ಕಾಮಗಾರಿಗಳ ಅಂದಾಜು ಪತ್ರಿಕೆ ತಯಾರಿಸುವುದು ಹಾಗೂ ಅವುಗಳನ್ನು ತಾಂತ್ರಿಕ ಮಂಜೂರಾತಿಗೆ ಹಾಗೂ ಆಡಳಿತಾತ್ಮಕ ಮಂಜುರಾತಿಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಪ್ರಚಲಿತ ಕಾಮಗಾರಿಗಳ ಹಾಗೂ ದುರಸ್ತಿ ಕಾಮಗಾರಿಗಳನ್ನು ನಿಗದಿತವಾಗಿ ಪರಿಶೀಲಿಸುವುದು, ಮೇಲ್ವಿಚಾರಣೆ ಮಾಡುವುದು ಹಾಗೂ ನಿರ್ವಹಣೆ. ಗುಣ ನಿಯಂತ್ರಣ ಪರೀಕ್ಷೆಗಳನ್ನು ಕೈಗೊಳ್ಳುವುದು ಹಾಗೂ ದಾಖಲಿಸುವುದು. ನೈಸರ್ಗಿಕ ವಿಕೋಪಗಳಿಂದ (ನೆರೆಹಾವಳಿಯಿಂದ) ಹಾಳಾದ ರಸ್ತೆಗಳ ವರದಿಯನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಎಂ.ಎ.ಎಸ್. ಹಾಗೂ ಆರ್.ಎಂ.ಆರ್. ವರದಿಗಳನ್ನು ಕಾರ್ಯನಿರ್ವಾಹಕ ಇಂಜನೀಯರರಿಗೆ ಸಲ್ಲಿಸುವುದು. ಭೂಸ್ವಾಧಿನ ಹಾಗೂ ಲೀಸ್ ಪ್ರಕರಣಗಳ ನಿರ್ವಹಣೆ. ಐ.ಎಸ್.ಓ. 9001:2000 ಪ್ರಕಾರ ಪಾಲನಾ ವರದಿಗಳನ್ನು ಸಲ್ಲಿಸುವುದು. ಸಿವ್ಹಿಲ್ ದಾವಾ ಮತ್ತು ಇತರೇ ಕೇಸುಗಳ ಗುನ್ಹೆ ಜಾಗೆ ನಕಾಶೆ ತಯಾರಿಸುವುದು ಸರ್ಕಾರಿ ಕಚೇರಿಗಳಿಗೆ ಬೇಕಾಗುವ ಸಾರ್ವಜನಿಕರಿಗೆ ಕಟ್ಟಡಗಳ ಬಾಡಿಗೆ ನಿಗದಿಪಡಿಸುವುದು. ಸರ್ಕಾರಿ ವಸತಿಗೃಹಗಳ, ಪ್ರವಾಸಿ ಮಂದಿರಗಳ ನಿರ್ವಹಣೆ.

**ಪ್ರಥಮ ದರ್ಜೆ ಸಹಾಯಕರು (ಸಿ–1)**

ಉಪವಿಭಾಗದ ಲೆಕ್ಕ ಪತ್ರ ನಿರ್ವಹಣೆ, ಟಪಾಲುಗಳ ಮರುಹಂಚಿಕೆ ಗುತ್ತಿಗೆದಾರರ ರಹಸ್ಯ ವರದಿಗಳು, ಮಾಹಿತಿ ಹಕ್ಕು ಪತ್ರಗಳ ನಿರ್ವಹಣೆ, ಕಾಮಗಾರಿ ಬಿಲ್ಲುಗಳ ಪರಿಶೀಲನೆ ಹಾಗೂ ವಿಭಾಗ ಕಚೇರಿಗೆ ಸಲ್ಲಿಸುವುದು. ಕರ್ನಾಟಕ ವಿಧಾನಸಭೆ, ವಿಧಾನಪರಿಷತ್ತಿನಲ್ಲಿ ಕೇಳಲಾಗುವ ಚುಕ್ಕೆ ಗುರುತಿನ ಪ್ರಶ್ನಾವಳಿಗಳಿಗೆ ಉಪವಿಭಾಗಕ್ಕೆ ಸಂಬಂಧಿಸಿದ ವಿವರವಾದ ಮಾಹಿತಿ ವರದಿಯನ್ನು ತಕ್ಷಣ ಮೇಲಾಧಿಕಾರಿಗಳ ಕಚೇರಿಗೆ ಸಲ್ಲಿಸುವುದು. ಹಾಗೂ ಕೋರ್ಟ ಪ್ರಕರಣಗಳ ನಿರ್ವಹಣೆ, ದಿನಗೂಲಿ ನೌಕರರ ವೇತನ ಬಿಲ್ ಮಾಡುವುದು.

**ದ್ವಿತೀಯ ದರ್ಜೆ ಸಹಾಯಕರು (ಸಿ–2)**

ಅಧಿಕಾರಿ/ಸಿಬ್ಬಂದಿಯವರ ವೇತನ ಬಿಲ್ಲು, ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿ ನಿರ್ವಹಣೆ, ಸೇವಾ ಪುಸ್ತಕಗಳ ನಿರ್ವಹಣೆ, ನಿವೃತ್ತಿ ಪ್ರಕರಣಗಳ ನಿರ್ವಹಣೆ, ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಪ್ರಸ್ತಾವನೆಗಳನ್ನು ಮೇಲಾಧಿಕಾರಿಗಳ ಕಚೇರಿಗೆ ಸಲ್ಲಿಸುವುದು. ವೇತನ ಮತ್ತು ಇತರ ಭತ್ಯೆಗಳಿಗೆ ಸಂಬಂಧಿಸಿದಂತೆ, ಪುರವಣೆ ಅಂದಾಜುಗಳ ಹಾಗೂ ಅಂತಿಮ ಹೊಂದಾಣಿಕೆಯ ಪ್ರಸ್ತಾವನೆಗಳನ್ನು ತಯಾರಿಸಿ, ಮೇಲಾಧಿಕಾರಿಗಳ ಕಚೇರಿಗೆ ಸಲ್ಲಿಸುವುದು. ಪ್ರವಾಸ ಭತ್ಯೆ ಬಿಲ್ಲು ತಯಾರಿಸಿ ವಿಭಾಗ ಕಚೇರಿಗೆ ಸಲ್ಲಿಸುವುದು.

**ದ್ವಿತೀಯ ದರ್ಜೆ ಸಹಾಯಕರು (ಸಿ–3) (ಉಗ್ರಾಣ ಸಹಾಯಕ)**

ಉಗ್ರಾಣ ಶಾಖೆಯ ಲೆಕ್ಕಪತ್ರ ನಿರ್ವಹಣೆ, ವಾಹನಗಳ ಲಾಗಬುಕ್ ನಿರ್ವಹಣೆ, ವಿದ್ಯುತ್ ಬಿಲ್ಲು ಹಾಗೂ ದೂರವಾಣಿ ಬಿಲ್ಲುಗಳ ನಿರ್ವಹಣೆ, ವಾಹನಗಳ ಇಂಧನ ಬಿಲ್ಲುಗಳ ನಿರ್ವಹಣೆ, ಕಚೇರಿಗೆ ಸಂಬಂಧಿಸಿದ ಲೇಖನಿ ಸಾಮಾಗ್ರಿಗಳ ನಿರ್ವಹಣೆ, ಯಂತ್ರೋಪಕರಣಗಳಿಗೆ ಸಂಬಂಧಿಸಿದಂತೆ ಹಾಗೂ ಉಗ್ರಾಣ ಸಾಮಾಗ್ರಿಗಳ ಕುರಿತಂತೆ ವಿಭಾಗ ಕಚೇರಿಗೆ ಮಾಸಿಕ, ಅರ್ಧವಾರ್ಷಿಕ ಹಾಗೂ ವಾರ್ಷಿಕ ವರದಿಯನ್ನು ಸಲ್ಲಿಸುವುದು.

**ದ್ವಿತೀಯ ದರ್ಜೆ ಸಹಾಯಕರು (ಕೆಲಸ ನಿರೀಕ್ಷಕರ ಹುದ್ದೆಗೆ ಎದುರಾಗಿ ಕೆಲಸ ನಿರ್ವಹಿಸುತ್ತಿರುವುದು)**

ಸಹಾಯಕ ಇಂಜನೀಯರರು / ಕಿರಿಯ ಇಂಜನೀಯರರು ಸೂಚಿಸಿದಂತೆ ಅವರ ಅಧೀನದಲ್ಲಿ ಕಾಮಗಾರಿಗಳ ಕಾರ್ಯನಿರ್ವಹಿಸುವುದು.

**ದ್ವಿತೀಯ ದರ್ಜೆ ಸಹಾಯಕರು ( ಮೇಸ್ತ್ರಿ ಹುದ್ದೆಗೆ ಎದುರಾಗಿ ಕೆಲಸ ನಿರ್ವಹಿಸುತ್ತಿರುವುದು)**

ಸಹಾಯಕ ಇಂಜನೀಯರರು/ ಕಿರಿಯ ಇಂಜನೀಯರರು ಸೂಚಿಸಿದಂತೆ ಅವರ ಅಧೀನದಲ್ಲಿ ಕಾಮಗಾರಿಗಳ ಕಾರ್ಯನಿರ್ವಹಿಸುವುದು.

### 3. ನಿರ್ಣಯ ತೆಗೆದುಕೊಳ್ಳುವಲ್ಲಿ ಪಾಲಿಸಬೇಕಾದ ವಿಧಿ ವಿಧಾನಗಳು ಮತ್ತು ಪರಿವೀಕ್ಷಣೆ ಮತ್ತು ಜವಾಬ್ದಾರಿ ವಿವರಗಳು

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು ಉಪವಿಭಾಗದ ಮೇಲುಸ್ತುವಾರಿ ಅಧಿಕಾರವನ್ನು ಹೊಂದಿರುತ್ತಾರೆ. ಅವರು ತಮ್ಮ ಮೇಲಾಧಿಕಾರಿಗಳ ನಿರ್ದೇಶನದಂತೆ ತಮ್ಮ ಅಧೀನ ಸಿಬ್ಬಂದಿಯವರಿಗೆ ಮಾರ್ಗದರ್ಶನವನ್ನು ಕೊಡುತ್ತಾರೆ.

ಗುತ್ತಿಗೆದಾರರು ಟೆಂಡರ್‌ನ ಮುಖಾಂತರ ದೊರಕಿಸಿಕೊಂಡ ಕಾಮಗಾರಿಗಳಿಗೆ ಕಾರ್ಯಾದೇಶವನ್ನು ಪಡೆದ ನಂತರ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರು ಕಾಮಗಾರಿಗೆ ಸಂಬಂಧಿಸಿದ ಜಾಗದ ಜವಾಬ್ದಾರಿಯನ್ನು ಸಲಹೆ ಸೂಚನೆಗಳನ್ನು ಅವರಿಗೆ ಕೊಡುತ್ತಾರೆ. ಸಂಬಂಧಿಸಿದ ಶಾಖಾಧಿಕಾರಿಗಳು ಕಾಮಗಾರಿಯ ನಕ್ಷೆಯಂತೆ ಅದರ ಗುರುತನ್ನು (ಲೈನ್‌ಔಟ್) ಹಾಕುತ್ತಾರೆ. ಹಾಗೂ ಪರಿಶೀಲನೆ ಮಾಡುತ್ತಾರೆ. ಹಾಗೂ ತಮ್ಮ ಅಧೀನ ಕಾರ್ಯನಿರೀಕ್ಷಕರಿಗೆ ಕಾಮಗಾರಿ ಮೇಲುಸ್ತುವಾರಿ ವಹಿಸುತ್ತಾರೆ. ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು, ಕಾರ್ಯನಿರ್ವಾಹಕ ಇಂಜನೀಯರರು ಮತ್ತು ಅಧೀಕ್ಷಕ ಇಂಜನೀಯರಗಳು, ಮುಖ್ಯ ಇಂಜನೀಯರವರು ಕಾಮಗಾರಿಯನ್ನು ವಿವಿಧ ಹಂತಗಳಲ್ಲಿ ನಿಗದಿತವಾಗಿ ಪರಿಶೀಲಿಸುತ್ತಾರೆ. ಕಾಮಗಾರಿಯ ವಿವಿಧ ಹಂತಗಳಲ್ಲಿ ಶಾಖಾಧಿಕಾರಿಗಳು ಅಳತೆಗಳನ್ನು ತೆಗೆದುಕೊಂಡು, ಅದೇ ದಿನಾಂಕದಂದು ಅಳತೆ ಪುಸ್ತಕದಲ್ಲಿ ನಮೂದಿಸುತ್ತಾರೆ. ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರು ಅವುಗಳನ್ನು ಪರಿಶೀಲಿಸಿದ ನಂತರ ಕಾಮಗಾರಿ ಬಿಲ್ಲುಗಳಿಗೆ ರುಜು ಹಾಕುತ್ತಾರೆ.

ವಿಭಾಗ ಕಚೇರಿಯಿಂದ ವರ್ಷಕ್ಕೊಂದು ಸಲ ಉಪವಿಭಾಗದ ಆಡಳಿತ ವರ್ಗಕ್ಕೆ ಸಂಬಂಧಿಸಿದಂತೆ ವಾರ್ಷಿಕ ತಪಾಸಣೆ ಹಾಗೂ ಪಶೀಲನೆ ನಡೆದು ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ. ಮಹಾಲೇಖಪಾಲರ ಕಚೇರಿಯಿಂದಲೂ ಉಪವಿಭಾಗಕ್ಕೆ ಲೆಕ್ಕ ಪತ್ರಗಳ ತಪಾಸಣೆ ನಡೆಯುತ್ತದೆ. ಐ.ಎಸ್.ಓ. 9001:2000 ರ ಪ್ರಕಾರ ದಾಖಲೆಗಳನ್ನು ನಿರ್ವಹಿಸಲಾಗುತ್ತಿದೆ.

**4. ಕರ್ತವ್ಯಗಳ ನಿರ್ವಹಣೆಯಲ್ಲಿ ಪಾಲಿಸುವ ಸಂಹಿತೆ (ಸೂತ್ರಗಳು)**

- ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳ ಅರ್ಥಿಕ ಅಧಿಕಾರ ಪ್ರತ್ಯಾಯೋಜನೆ.
- ಸರ್ಕಾರಿ ಅದೇಶ ಸಂಖ್ಯೆ : ಪಿಡಬ್ಲ್ಯೂ-1:ಎಫ್.ಸಿ.ಆರ್-93 ಬೆಂಗಳೂರು ದಿನಾಂಕಃ15-12-1994 ಸಾಮಾನ್ಯ ಅಧಿಕಾರ ಪ್ರತ್ಯಾಯೋಜನೆ
- ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ-1 ಟಿಎಫ್‌ಸಿ-2001 ಬೆಂಗಳೂರು ದಿನಾಂಕಃ02-02-2001 ಲೋಕೋಪಯೋಗಿ ಇಲಾಖೆ ಸಂಹಿತೆ
- ಲೋಕೋಪಯೋಗಿ ಲೆಕ್ಕ ಸಂಹಿತೆ.

**5. ಅನುಸರಿಸುವ ಕಾಯ್ದೆ ಕಾನೂನುಗಳು**

ಇಲಾಖೆಯ ಕಾಮಗಾರಿಗೆ ಸಂಬಂಧಪಟ್ಟ ನಿರ್ಣಯ ತೆಗೆದುಕೊಳ್ಳುವಲ್ಲಿ ಈ ಕೆಳಗೆ ನಮೂದಿಸಿದ ಕಾಯ್ದೆ ಕಾನೂನುಗಳನ್ನು ಅನುಸರಿಸಲಾಗುವುದು.

- ಲೋಕೋಪಯೊಗಿ ಸಂಹಿತೆ ಭಾಗ-1 ಮತ್ತು ಭಾಗ-2
- ಕರ್ನಾಟಕ ಪಾರದರ್ಶಕ ನಿಯಮ
- ಲೋಕೋಪಯೋಗಿ ಇಲಾಖೆ ಲೆಕ್ಕ ಸಂಹಿತೆ
- ಭೂ ಸ್ವಾಧೀನ ಕಾಯ್ದೆ- ರಾಜ್ಯ ಹೆದ್ದಾರಿ ಕಾಯ್ದೆ-1964 ರ ನಿಯಮಾವಳಿಗಳ ಉಗ್ರಾಣ ಕೈಪಿಡಿ
- ಕರ್ನಾಟಕ ಲಿಟಿಗೇಷನ್ ಕಾಯ್ದೆ ಆಡಳಿತವನ್ನು ನಡೆಸಲು ಕರ್ನಾಟಕ ಅರ್ಥಿಕ ಸಂಹಿತೆ
- ಕರ್ನಾಟಕ ಖಜಾನೆ ಸಂಹಿತೆ
- ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು
- ಕರ್ನಾಟಕ ನಾಗರಿಕ ಸೇವಾ ನಡತೆ (ಸಿಸಿಎ) ನಿಯಮಗಳು
- ಕಚೇರಿ ಕೈಪಿಡಿ
- ಬಜೆಟ್ ಮ್ಯಾನುವೆಲ್
- ಐ.ಎಸ್.ಓ. 9001:2000 ಪಾಲಿಸುವುದು.

**6. ಇಲಾಖೆಯ ಅಧೀನದಲ್ಲಿರುವ ವರ್ಗೀಕರಣದ ತಖ್ತೆಗಳು**
**(ಐ.ಎಸ್.ಓ. 9001:2000 ಪ್ರಕಾರ)**

**<u>ತಾಂತ್ರಿಕ ಶಾಖೆ</u>**
ಕಾರ್ಯನಿರ್ವಾಹಕ ಇಂಜನೀಯರರು, ಅಧೀಕ್ಷಕ ಇಂಜನೀಯರರು, ಮುಖ್ಯ ಇಂಜನೀಯರರ ಮಟ್ಟದಲ್ಲಿ ಅಂದಾಜು ಪತ್ರಿಕೆಗಳು ಹಾಗೂ ಅದಕ್ಕೆ ಸಂಬಂಧಿಸಿದ ಕಡತಗಳು, ಪ್ರಗತಿ ವರದಿಗಳು
ದರಸೂಚಿ-ಆಯವ್ಯಯಕ್ಕೆ ಸಂಬಂಧಪಟ್ಟ ಆಯವ್ಯಯ ಪ್ರಸ್ತಾವನೆ ಮತ್ತು ಆಯವ್ಯಯ ಪಟ್ಟಿ ತುಂಡುಗುತ್ತಿಗೆ ಕರಾರು ಪತ್ರ ವಹಿ, ರಸ್ತೆ, ಸೇತುವೆಗಳ ಹಾಗೂ ಕಟ್ಟಡಗಳ ವಹಿ.

**<u>ಲೆಕ್ಕಪತ್ರ ಶಾಖೆ</u>**
ನಗದು ಪುಸ್ತಕ (ವರ್ಕ್‌ಕ್ಯಾಶ್‌ಬುಕ್)
ರೆಮಿಟನ್ಸ್ ರಜಿಸ್ಟರ್
ರಸೀಪ್ಟ್ ಬುಕ್
ಎಸ್.ಬಿ.ಆರ್ ರಜಿಸ್ಟರ್

**ಆಡಳಿತಾತ್ಮಕ ಶಾಖೆ**
ಹಾಜರಾತಿ ಪುಸ್ತಕದ ವಹಿ
ಕಚೇರಿ ಆದೇಶದ ವಹಿ
ಆವಕ ಪುಸಕ್ತದ ವಹಿ, ಜಾವಕ ಪುಸ್ತಕದ ವಹಿ
ಅಂಚೆ ಚೀಟಿ ವಹಿ
ಸಂಘಟನಾ ಫಲಕ ವಹಿ
ಪದಧಾರಣ ವಹಿ
ಸಿಬ್ಬಂದಿಗಳ ಸೇವಾ ಪುಸ್ತಕದ ವಹಿ
ಸಾಮಾನ್ಯ ನಗದು ಪುಸ್ತಕದ ವಹಿ
ಸಾದಿಲ್ವಾರು ವೆಚ್ಚದ ವಹಿ
ಪ್ರಯಾಣ ಭತ್ಯೆ ವಹಿ
ವಾರ್ಷಿಕ ವೇತನ ವಹಿ

**<u>ಉಗ್ರಾಣ ಶಾಖೆ.</u>**
ಸ್ಟಾಕ ಸ್ವೀಕೃತಿ ವಹಿ, ಸ್ಟಾಕ ವಿತರಣೆ ವಹಿ
ಅರ್ಧ ವಾರ್ಷಿಕ ದಾಸ್ತುನು ವಹಿ
ಅಳತೆ ಪುಸ್ತಕದ ವಹಿ
ಪೀಠೋಪಕರಣಗಳ ವಹಿ
ಲೇಖನಿ ಸಾಮಾಗ್ರಿಗಳ ವಹಿ
ಉಪಕರಣ ಮತ್ತು ಸ್ಥಿರ ಯಂತ್ರೋಕರಣಗಳ ವಹಿ
ವಾಹನಗಳ ಲಾಗ್ ಬುಕ್

**7. ಇಲಾಖೆಯ ನೀತಿ ನಿಯಮಗಳನ್ನು ಅಥವಾ ಆಡಳಿತವನ್ನು ನಡೆಸುವಲ್ಲಿ ಪಡೆಯುವ ಸಲಹಾ ಸೂತ್ರಗಳ ಅಥವಾ ಸಾರ್ವಜನಿಕ ಸದಸ್ಯರುಗಳಿಂದ ಸಲಹೆ ಪಡೆಯುವ ಬಗ್ಗೆ ಇರುವ ವ್ಯವಸ್ಥೆ ಮತ್ತು ವಿವರ**

ಇಲಾಖೆಯಲ್ಲಿ ಈ ತರಹದ ವ್ಯವಸ್ಥೆ ಇರುವುದಿಲ್ಲ

**8. ಇಲಾಖೆಯಲ್ಲಿ ನಿಗಮ/ಪರಿಷತ್ ಸಮಿತಿ ಇತರೆ ಸಂಸ್ಥೆಗಳ ವಿವರ**

ಇಲಾಖೆಯಲ್ಲಿ ಈ ತರಹದ ವ್ಯವಸ್ಥೆ ಇರುವುದಿಲ್ಲ

**9. ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದ ಹೆಸರುಗಳು**

| **ಅ.ನಂ** | **ಹುದ್ದೆ** | **ಹೆಸರು** |
|---|---|---|
| I | ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು-1 | ಶ್ರೀ. ಎನ್.ಎಸ್.ಭರಡಿಶೆಟ್ಟರ. |
| II | ಸಹಾಯಕ ಇಂಜನೀಯರರು-4 | 1) ಹುದ್ದೆ ಖಾಲಿ<br>2) ಹುದ್ದೆ ಖಾಲಿ<br>3) ಹುದ್ದೆ ಖಾಲಿ<br>4) ಶ್ರೀ.ಎನ್.ಎಸ್.ಭರಡಿಶೆಟ್ಟರ |
| III | ಕಿರಿಯ ಇಂಜನೀಯರರು-2 | 1) ಹುದ್ದೆ ಖಾಲಿ<br>2) ಹುದ್ದೆ ಖಾಲಿ |
| IV | ಪ್ರಥಮ ದರ್ಜೆ ಸಹಾಯಕರು-1 | 1) ಶ್ರೀ.ಸಿ.ಬಿ.ಅಗಸನಕೊಪ್ಪ |
| V | ದ್ವಿತಿಯ ದರ್ಜೆ ಸಹಾಯಕರು-2 | 1) ಶ್ರೀ.ಎಸ್.ಎಸ್.ಬೋರಕನವರ.<br>2) ಶ್ರೀ.ಹರೀಶ.ಸಂ.ದೊಡ್ಡಮನಿ. |
| VI | ಕಂಪ್ಯೂಟರ್ ಅಪರೇಟರ್-1 | 1) ಖಾಲಿ ಇರುತ್ತದೆ. |
| VII | ಕೆಲಸ ನಿರೀಕ್ಷಕರು-4 | 1) ಖಾಲಿ ಇರುತ್ತದೆ.<br>2) ಖಾಲಿ ಇರುತ್ತದೆ.<br>3) ಖಾಲಿ ಇರುತ್ತದೆ.<br>4) ಖಾಲಿ ಇರುತ್ತದೆ. |
| VIII | ಮೇಸ್ತ್ರಿ-1 | 1) ಖಾಲಿ ಇರುತ್ತದೆ. |
| IX | ಜವಾನರು-2 | 1) ಶ್ರೀಮತಿ.ಎಲ್.ಎಸ್.ಕುಂಬರ.<br>2) ಶ್ರೀ.ಜಿ.ಎಸ್.ಮಾದರ |
| X | ಚೌಕಿದಾರ-1 | 1) ಶ್ರೀ.ಶಬ್ಬೀರಹ್ಮದ.ಬಾ.ಆದ್ವಾನಿ. |
| **ಸೂಪನ್ಯೂಮರಿ ಹುದ್ದೆಗಳು** | | 1) ಹುದ್ದೆ ಖಾಲಿ ಇರುತ್ತದೆ. |

**10. ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರ ತಿಂಗಳ/ ಪ್ರತಿಫಲ ಮತ್ತು ಅದನ್ನು ನೀಡುವ ಸೂತ್ರಗಳು**

**ದಿನಾಂಕ : 01-01-2022 ಕ್ಕೆ ಇದ್ದಂತೆ.**

| ಅ.ನಂ | ಹುದ್ದೆ | ಹೆಸರು | ವೇತನ ಶ್ರೇಣಿ | ಮೂಲವೇತನ |
|---|---|---|---|---|
| I | ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು | ಶ್ರೀ.ಎನ್.ಎಸ್.ಭರಡಿಶೆಟ್ಟರ.(ಪ್ರ) | 43100 ರಿಂದ 83900 | 50150 |
| | ಸಹಾಯಕ ಇಂಜಿನೀಯರ | ಹುದ್ದೆ ಖಾಲಿ | 45300 ರಿಂದ 88300 | |
| | ಸಹಾಯಕ ಇಂಜಿನೀಯರ | ಹುದ್ದೆ ಖಾಲಿ | 45300 ರಿಂದ 88300 | |
| | ಸಹಾಯಕ ಇಂಜಿನೀಯರ | ಹುದ್ದೆ ಖಾಲಿ | 45300 ರಿಂದ 88300 | |
| | ಸಹಾಯಕ ಇಂಜಿನೀಯರ | ಶ್ರೀ.ಎನ್.ಎಸ್.ಭರಡಿಶೆಟ್ಟರ. | 43100 ರಿಂದ 83900 | 50150.00 |
| III | ಕಿರಿಯ ಇಂಜನೀಯರರು | ಹುದ್ದೆ ಖಾಲಿ . | 33450 ರಿಂದ 62600 | 50150.00 |
| | ಕಿರಿಯ ಇಂಜನೀಯರರು | ಹುದ್ದೆ ಖಾಲಿ | 33450 ರಿಂದ 62600 | 50150.00 |
| IV | ಪ್ರಥಮ ದರ್ಜೆ ಸಹಾಯಕರು | ಶ್ರೀ.ಸಿ.ಬಿ.ಅಗಸನಕೊಪ್ಪ | 27650 ರಿಂದ 52650 | 42000.00 |
| V | ದ್ವಿತಿಯ ದರ್ಜೆ ಸಹಾಯಕರು | ಶ್ರೀ.ಎಸ್.ಎಸ್.ಬೋರಕನವರ | 23500 ರಿಂದ 47650 | 27000.00 |
| | ದ್ವಿತಿಯ ದರ್ಜೆ ಸಹಾಯಕರು | ಶ್ರೀ.ಹೆಚ್.ಎಸ್.ದೊಡ್ಡಮನಿ | 21400 ರಿಂದ 42000 | 21900.00 |
| VI | ಕಂಪ್ಯೂಟರ್ ಅಪರೇಟರ್ | ಖಾಲಿ ಇರುತ್ತದೆ | ಸದರ | |
| VII | ಕೆಲಸ ನಿರೀಕ್ಷಕರು | ಖಾಲಿ ಇರುತ್ತದೆ | ಸದರ | |
| | ಕೆಲಸ ನಿರೀಕ್ಷಕರು | ಖಾಲಿ ಇರುತ್ತದೆ | ಸದರ | |
| | ಕೆಲಸ ನಿರೀಕ್ಷಕರು | ಖಾಲಿ ಇರುತ್ತದೆ | ಸದರ | |
| | ಕೆಲಸ ನಿರೀಕ್ಷಕರು | ಖಾಲಿ ಇರುತ್ತದೆ | ಸದರ | |
| VIII | ಮೇಸ್ತ್ರಿ | ಖಾಲಿ ಇರುತ್ತದೆ | ಸದರ | |
| IX | ಜವಾನರು | ಶ್ರೀ.ಜಿ.ಎಸ್.ಮಾದರ | 17000 ರಿಂದ 28950 | 24600.00 |
| | | ಶ್ರೀಮತಿ.ಎಲ್.ಎಸ್.ಕುಂಬಾರ. | 18600 ರಿಂದ 32600 | 23500.00 |
| X | ಚೌಕಿದಾರ | ಶ್ರೀ.ಶಬ್ಬೀರಹ್ಮದ.ಬಾ.ಆದ್ವಾನಿ | 17000 ರಿಂದ 28950 | 19500.00 |
| XI | **ಸೂಪನ್ಯೂಮರಿ ಹುದ್ದೆಗಳು** | ಹುದ್ದೆ ಖಲಿಇರುತ್ತದೆ. | | |
| | | | | |

**11. ಇಲಾಖೆಯಲ್ಲಿರುವ ವಲಯ / ವಿಭಾಗಗಳಿಗೆ ನೀಡಿದ ಆಯವ್ಯಯ ವಿವರಗಳು**

ನಬಾರ್ಡ್ ಆರ್.ಐ.ಡಿ.ಎಫ್ ಯೋಜನೆಗಳು, ಲೆಕ್ಕ ಶೀರ್ಷಿಕೆ '3054'–12 ನೇ ಹಣಕಾಸು ಯೋಜನೆ (ರಸ್ತೆ ಮತ್ತು ಸೇತುವೆ), '5054' ನಬಾರ್ಡ್ ಸೇತುಗಳು, '5054' ಸಿ.ಆರ್.ಎಫ್, '5054' ರಸ್ತೆ ಮತ್ತು ಸೇತುವೆ, ಡಾ: ನಂಜುಂಡಪ್ಪ ವರದಿ, '4202', ಲೆಕ್ಕ ಶೀರ್ಷಿಕೆ '3054' ಸಿ.ಎಂ.ಜೆ.ಎಸ್.ವಾಯ್, '2059' '2216' ಮತ್ತು 8443 ಜಿಲ್ಲಾಧಿಕಾರಿಗಳ ಅನುದಾನ ವಂತಿಗೆ ಸ್ವೀಕರಿಸಿದ ಕಾಮಗಾರಿಗಳು ಇತರೆ ಉಳಿದ ಲೆಕ್ಕ ಶೀರ್ಷಿಕೆಗಳ ಬಿಲ್ಲನ್ನು ವಿಭಾಗ ಕಚೇರಿಗೆ ಸಲ್ಲಿಸಲಾಗುವುದು ವಿಭಾಗ ಕಚೇರಿಯಲ್ಲಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಬಿಲ್ಲು ಸಂದಾಯವಾಗುತ್ತದೆ.

**12. ಇಲಾಖೆಯಲ್ಲಿ ಸಹಾಯ ಧನ ನೀಡುವ ಕಾರ್ಯಕ್ರಮಗಳ ನಿರ್ವಹಣಾ ವಿವರ ಮತ್ತು ಅದಕ್ಕೆ ಒದಗಿಸಲಾದ ಅನುದಾನ ಮತ್ತು ಫಲಾನುಭವಿಗಳ ವಿವರ**

ಸಹಾಯಧನ ನೀಡುವ ಕಾರ್ಯಕ್ರಮಗಳು ಇಲ್ಲ

**13. ಇಲಾಖೆಯಲ್ಲಿ ನೀಡುತ್ತಿರುವ ಪರ್ಮಿಟ್ ಅಥವಾ ಅಧಿಕಾರ ಪತ್ರಗಳ ವಿವರ ಮತ್ತು ಅದಕ್ಕೆ ಒದಗಿಸಲಾದ ಅನುದಾನ ಮತ್ತು ಫಲಾನುಭವಿಗಳ ವಿವರ**

ಸಹಾಯಧನ ನೀಡುವ ಕಾರ್ಯಕ್ರಮಗಳು ಇಲ್ಲ

**14. ಇಲಾಖೆಯಲ್ಲಿ ನೀಡುತ್ತಿರುವ ಪರ್ಮಿಟ್ ಅಥವಾ ಅಧಿಕಾರ ಪತ್ರಗಳ ವಿವರ ಮತ್ತು ರಿಯಾಯತಿ ಪಡೆಯುವರ ವಿವರ**

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು ನವಲಗುಂದ ಉಪವಿಭಾಗದ ವ್ಯಾಪ್ತಿಯಲ್ಲಿ ಯಾವುದೇ ಪರ್ಮಿಟ್ ನೀಡಿರುವುದಿಲ್ಲ.

**15. ಇಲಾಖೆಯಲ್ಲಿ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ನೀಡಿರುವ ಬಗ್ಗೆ ವಿವರ**

ಇಮೇಲ್ ವಿಳಾಸ : aeepwdnvl@gmail.com

**16. ಇಲಾಖೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಅಧಿಕಾರಿಗಳ ಹೆಸರು ಪದನಾಮ ಮತ್ತು ವಿವರಗಳು**

| ಮಾಹಿತಿ ಅಧಿಕಾರಿ (ಹೆಸರು/ವಿಳಾಸ/ದೂರವಾಣಿ ಇತ್ಯಾದಿ) | ಸಾರ್ವಜನಿಕ ಮಾಹಿತಿ ಅಧಿಕಾರಿ (ಹೆಸರು/ವಿಳಾಸ/ದೂರವಾಣಿ ಇತ್ಯಾದಿ) | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು (ಹೆಸರು/ವಿಳಾಸ/ದೂರವಾಣಿ ಇತ್ಯಾದಿ) |
| --- | --- | --- |
| **ಡಾ: ಶ್ರೀ.ಟಿ.ಎಸ್.ಮುರಳಿದರನ್.**<br>ಕಾರ್ಯನಿರ್ವಾಹಕ ಇಂಜಿನೀಯರರು<br>ಲೋಕೋಪಯೋಗಿ, ಇಲಾಖೆ<br>ಧಾರವಾಡ ವಿಭಾಗ, ಧಾರವಾಡ.<br>ಮೊಬೈಲ್ ನಂ. 9845810631 | **ಶ್ರೀ.ಎನ್.ಎಸ್.ಭರಡಿಶೆಟ್ಟರ.**<br>ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು<br>ಲೋಕೋಪಯೋಗಿ ಇಲಾಖೆ<br>ಉಪ-ವಿಭಾಗ ನವಲಗುಂದ<br>ಮೊಬೈಲ್ ನಂ.9902222149. | **1) ಶ್ರೀ.ಎನ್.ಎಸ್.ಭರಡಿಶೆಟ್ಟರ. ಸ.ಇಂ.**<br>ಸಹಾಯಕ ಇಂಜಿನೀಯರರು<br>ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು<br>ಲೋಕೋಪಯೋಗಿ ಇಲಾಖೆ<br>ಉಪ-ವಿಭಾಗ ನವಲಗುಂದ<br>ಮೊಬೈಲ್ ನಂ. 9902222149.<br>**2) ಶ್ರೀ.ಸಿ.ಬಿ.ಅಗಸನಕೊಪ್ಪ.**<br>ಪ್ರಥಮ ದರ್ಜೆ ಸಹಾಯಕ<br>ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು<br>ಲೋಕೋಪಯೋಗಿ ಇಲಾಖೆ<br>ಉಪ-ವಿಭಾಗ ನವಲಗುಂದ<br>ಮೊಬೈಲ್ ನಂ.9148374129. |
| ಪ್ಯಾಕ್ಸ್ : 0836-2747944<br>ಕಛೇರಿ ದೂರವಾಣಿ :0836-2447740<br>ಇ-ಮೇಲ್: eepwddwd@gmail.com | ಪ್ಯಾಕ್ಸ್ :<br>ಕಛೇರಿ ದೂರವಾಣಿ : 08380-295045<br>ಇ-ಮೇಲ್: aeepwdnvg@kpwd.gov.in | ಪ್ಯಾಕ್ಸ್ :<br>ಕಛೇರಿ ದೂರವಾಣಿ : 08380-295045<br>ಇ-ಮೇಲ್ : aeepwdnvl@gmail.com |

| Appellate Authority (Name/Address/Phone etc) | Public Information Officer (Name/Address/Phone etc) | Assistant Public Information Officer (Name Address/Phone etc) |
| --- | --- | --- |
| **Dr, Shri.T.S.Muralidaran**<br>Executive Engineer<br>PW Department Dharwad Division.<br>Dharwad.<br>Mobile No. 9845810631 | **Shri. N.S.Bharadishettar**<br>Assistant Executive Engineer<br>PW<br>Department<br>Sub-Division. Navalgund.<br>Mobile No. 9902222149. | **1) Shri.N.S.Bharadishettar**<br>Assistant Engineer<br>Office of the<br>PW<br>Department<br>Sub-Division. Navalgund.<br>Mobile No. 9902222149<br>**2) Shri. C.B.Agasanakoppa.**<br>First Division Assistant<br>Office of the<br>PW Ports & Inland<br>Water Transport Department<br>Sub-Division. Navalgund.<br>Mobile No. 9148374129 |
| Fax : 0836-2747944<br>Phone Office: 0836-2447740<br>E-mail: eepwddwd@gmail.com | Fax:<br>Phone Office : 08380-295045<br>E-mail: aeepwdnvg@kpwd.gov.in | Fax :<br>Phone Office:08380-295045<br>E-mail : aeepwdnvl@gmail.com |

## 17. ಇತರೆ ಒದಗಿಸತಕ್ಕಂತಹ ಮಾಹಿತಿಗಳು.

-ಯಾವುದೂ ಇರುವುದಿಲ್ಲ-

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ಪ್ರ)
ಲೋಕೋಪಯೋಗಿ ಇಲಾಖೆ ಉಪವಿಭಾಗ ನವಲಗುಂದ.